Akashvani : Bangalore
National Bulletin In Kannada
04.01.2025 : 7.35 AM
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
*******

ಮುಖ್ಯಾಂಶಗಳು:

- ಜನರ ಆರೋಗ್ಯ ರಕ್ಷಣೆಯಲ್ಲಿ ಆಯುಷ್ಮಾನ್ ಭಾರತ್ ಯೋಜನೆ ಅತ್ಯಂತ ಮಹತ್ವದ್ದು - ರಾಷ್ಟ್ರಪತಿ ದ್ರೌಪದಿ ಮುರ್ಮು
- ನವದೆಹಲಿಯಲ್ಲಿಂದು ಗ್ರಾಮೀಣ ಭಾರತ ಮಹೋತ್ಸವ ಉದ್ಘಾಟಿಸಲಿರುವ ಪ್ರಧಾನಿ ನರೇಂದ್ರ ಮೋದಿ
- ಇಂದು ವಿಶ್ವ ಬ್ರೈಲ್ ದಿನ; ಜಗತ್ತಿನಾದ್ಯಂತ ಲೂಯಿಸ್ ಬ್ರೈಲ್ ಸ್ಮರಣೆ
- ಬಾರ್ಡರ್-ಗವಾಸ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್; ಅಂತಿಮ ಪಂದ್ಯದಲ್ಲಿ ಭಾರತ-ಆಸೀಸ್ ತೀವ್ರ ಹಣಾಹಣಿ

*****

ಆಯುಷ್ಮಾನ್ ಭಾರತ' ಯೋಜನೆ ಜನರ ಆರೋಗ್ಯ ಕಾಪಾಡುವಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಬೆಳಗಾವಿಯಲ್ಲಿ ನಿನ್ನೆ ಕೆಎಲ್ಇ ಕ್ಯಾನ್ಸರ್ ಆಸ್ಪತ್ರೆ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಜನರ ಆರೋಗ್ಯ ಕಾಪಾಡಲು ಆಯುಷ್ಮಾನ್ ಭಾರತ್ ಆರೋಗ್ಯ ಯೋಜನೆ ಜಾರಿಗೆ ತಂದಿದ್ದು ಬಡವರಿಗೆ ದೊರೆಯುತ್ತಿದ್ದ ಈ ಸೌಕರ್ಯವನ್ನು ೭೦ ವರ್ಷ ಪೂರೈಸಿದ ಹಿರಿಯ ನಾಗರಿಕರಿಗೆ ವಿಸ್ತರಿಸಲಾಗಿದೆ ಎಂದರು ಜಗತ್ತಿನಾದ್ಯಂತ ೨೦ ಶತಕೋಟಿ ಜನರು ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ, ಇಂತಹ ಸುಸಜ್ಜಿತ ಆಸ್ಪತ್ರೆಗಳು ಸಾರ್ವಜನಿಕರಿಗೆ ಗುಣಮಟ್ಟದ ಚಿಕಿತ್ಸೆ ನೀಡುವಲ್ಲಿ ವಿಶೇಷ ಪಾತ್ರ ವಹಿಸಲಿದೆ ಎಂದರು.

ಧ್ವನಿ - ರಾಷ್ಟ್ರಪತಿ ಮುರ್ಮು

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಮಾತನಾಡಿ, ತಪ್ಪು ಜೀವನವಿಧಾನ ಹಾಗೂ ಸಮತೋಲನ ಆಹಾರದ ಕೊರತೆಯಿಂದಾಗಿ ಜನರು ಅನೇಕ ರೋಗಗಳಿಗೆ

ತುತ್ತಾಗುತ್ತಿದ್ದಾರೆ. ದೇಶದಲ್ಲಿ ಶೇಕಡ ೧೨.೮ರಷ್ಟು ಜನರು ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದಾರೆ. ಕೇಂದ್ರ ಸರ್ಕಾರ ಸಾರ್ವಜನಿಕ ಆರೋಗ್ಯ ಕಾಪಾಡಲು ವಿಶೇಷ ಆದ್ಯತೆ ನೀಡುತ್ತಿದೆ ಎಂದರು.

*****

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ನವದೆಹಲಿಯಲ್ಲಿ ಗ್ರಾಮೀಣ ಭಾರತ ಮಹೋತ್ಸವ -೨೦೨೫ ಅನ್ನು ಉದ್ಘಾಟಿಸಲಿದ್ದಾರೆ. ಗ್ರಾಮೀಣ ಮೂಲಸೌಕರ್ಯಗಳನ್ನು ಹೆಚ್ಚಿಸಲು, ಸ್ವಾವಲಂಬಿ ಆರ್ಥಿಕತೆಯನ್ನು ಸೃಷ್ಟಿಸಲು ಮತ್ತು ಗ್ರಾಮೀಣ ಸಮುದಾಯಗಳಲ್ಲಿ ನಾವೀನ್ಯತೆಯನ್ನು ಬೆಳೆಸುವ ಗುರಿಯನ್ನು ಮಹೋತ್ಸವ ಹೊಂದಿದೆ. ಮಹೋತ್ಸವದಲ್ಲಿ ರೋಮಾಂಚಕ ಪ್ರದರ್ಶನಗಳ ಮೂಲಕ ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಪ್ರದರ್ಶಿಸಲಾಗುತ್ತದೆ. ಆರು ದಿನಗಳ ಕಾಲ ನಡೆಯುವ ಮಹೋತ್ಸವದ ಘೋಷ ವಾಕ್ಯ - ವಿಕಸಿತ ಭಾರತ- ೨೦೪೭ ಕ್ಕಾಗಿ ಚೇತರಿಸಿಕೊಳ್ಳುವ ಗ್ರಾಮೀಣ ಭಾರತವನ್ನು ನಿರ್ಮಿಸುವುದು ಎಂಬುದಾಗಿದೆ. ಉದ್ಯಮಶೀಲತೆಯ ಮೂಲಕ ಗ್ರಾಮೀಣ ಮಹಿಳೆಯರನ್ನು ಸಬಲೀಕರಣಗೊಳಿಸುವುದು ಮಹೋತ್ಸವದ ಪ್ರಮುಖ ಧ್ಯೇಯವಾಗಿದೆ. ಸರ್ಕಾರಿ ಅಧಿಕಾರಿಗಳು, ಗ್ರಾಮೀಣ ಉದ್ಯಮಿಗಳು, ಕುಶಲಕರ್ಮಿಗಳು ಮತ್ತು ವಿವಿಧ ವಲಯಗಳ ಮಧ್ಯಸ್ಥಗಾರರನ್ನು ಒಟ್ಟುಗೂಡಿಸಿ, ಸಹಕಾರಿ ಮತ್ತು ಸಾಮೂಹಿಕ ಗ್ರಾಮೀಣ ಪರಿವರ್ತನೆಗಾಗಿ ಮಾರ್ಗಸೂಚಿ ರಚಿಸಲಾಗುವುದು. ಈಶಾನ್ಯ ಭಾರತದ ಮೇಲೆ ವಿಶೇಷ ಗಮನಹರಿಸುವುದರೊಂದಿಗೆ, ಗ್ರಾಮೀಣ ಜನಸಂಖ್ಯೆಯಲ್ಲಿ ಆರ್ಥಿಕ ಸ್ಥಿರತೆ ಮತ್ತು ಆರ್ಥಿಕ ಭದ್ರತೆಯನ್ನು ಉತ್ತೇಜಿಸುವ ಉದ್ದೇಶವನ್ನು ಮಹೋತ್ಸವ ಒಳಗೊಂಡಿದೆ.

*****

ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಹಾಗೂ ಮಾಲ್ಡೀವ್ಸ್ ವಿದೇಶಾಂಗ ಸಚಿವ ಡಾ. ಅಬ್ದುಲ್ಲಾ ಖಲೀಲ್ ಅವರೊಂದಿಗೆ ನವದೆಹಲಿಯಲ್ಲಿ ನಿನ್ನೆ ದ್ವಿಪಕ್ಷೀಯ ಸಮಾಲೋಚನೆ ನಡೆಸಿದರು. ಸಚಿವ ಎಸ್.

ಜೈಶಂಕರ್ ಮಾತನಾಡಿ, ದ್ವೀಪ ರಾಷ್ಟ್ರದ ಜತೆಗಿನ ಬಾಂಧವ್ಯಕ್ಕೆ ಮಹತ್ವ ನೀಡುತ್ತಿದ್ದು, ನೆರೆಹೊರೆ ಮೊದಲು ನೀತಿ ಹಾಗೂ ಸಾಗರ್ ದೃಷ್ಟಿಕೋನದನ್ವಯ ಮಾಲ್ಡೀವ್ಸ್‌ಗೆ ಬೆಂಬಲ ಮುಂದುವರಿಸುವುದಾಗಿ ಭರವಸೆ ನೀಡಿದರು. ಮಾಲ್ಡೀವ್ಸ್ ವಿದೇಶಾಂಗ ಸಚಿವರು ಭಾರತದ ಮೊದಲ ಪ್ರತಿಕ್ರಿಯೆ ಉಪಕ್ರಮವು ಅತ್ಯಂತ ಉಪಯುಕ್ತವಾಗಿದ್ದು, ತುರ್ತು ಸಂದರ್ಭದಲ್ಲಿ ಮಾಲ್ಡೀವ್ಸ್‌ಗೆ ಭಾರತ ಅಗತ್ಯ ಆರ್ಥಿಕ ನೆರವು ನೀಡಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

*****

ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಇಲಾಖೆಯ ೪೦ನೇ ಸಂಸ್ಥಾಪನಾ ದಿನವನ್ನು ಇಂದು ಆಚರಿಸುತ್ತಿದ್ದು, ನವದೆಹಲಿಯಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್ ಉದ್ಘಾಟಿಸಲಿದ್ದಾರೆ. ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಪ್ರೊಫೆಸರ್ ಅಜಯ್ ಕುಮಾರ್ ಸೂದ್ ಹಾಗೂ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ ಉನ್ನತ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

*****

ಬೆಂಗಳೂರಿನಲ್ಲಿ ಇಂದು ಪ್ರಧಾನಮಂತ್ರಿ ಉದ್ಯೋಗ ಸೃಜನೆ ಯೋಜನೆ ಕುರಿತ ವಸ್ತುಪ್ರದರ್ಶನಕ್ಕೆ ಕೇಂದ್ರ ಸಣ್ಣ, ಮಧ್ಯಮ, ಉದ್ಯಮ ವಲಯ ಹಾಗೂ ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಚಾಲನೆ ನೀಡಲಿದ್ದಾರೆ. ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಆಯೋಜಿಸಿರುವ ವಲಯ ಮಟ್ಟದ ಕಾರ್ಯಕ್ರಮದಲ್ಲಿ ಕೇಂದ್ರ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷ ಮನೋಜ್ ಕುಮಾರ್, ಸಂಸದ ಪಿ.ಸಿ. ಮೋಹನ್ ಮತ್ತಿತರ ಗಣ್ಯರು ಪಾಲ್ಗೊಳ್ಳಲಿದ್ದಾರೆ.

*****

ಇಂದು ವಿಶ್ವ ಬ್ರೈಲ್ ದಿನ. ದೃಷ್ಟಿ ವಿಶೇಷಚೇತನರ ಬದುಕಿನಲ್ಲಿ ಆಶಾಕಿರಣ ಮೂಡಿಸಿದ ಸುದಿನ.

ದೃಷ್ಟಿಯಿಲ್ಲದವರಿಗೆ ಬ್ರೈಲ್ ಲಿಪಿ ಒದಗಿಸಿಕೊಟ್ಟ ಲೂಯಿಸ್ ಬ್ರೈಲ್ ಅವರನ್ನು ಇಂದು ಜಗತ್ತಿನಾದ್ಯಂತ ಇಂದು ಸ್ಮರಿಸಲಾಗುತ್ತಿದೆ. ಲೂಯಿಸ್ ಬ್ರೈಲ್ ಅವರು ವ್ಯಾಪಕ ಸಂಶೋಧನೆಯ ಮೂಲಕ ಬ್ರೈಲ್ ಲಿಪಿ ಕಂಡುಹಿಡಿದಿದ್ದು, ಅದನ್ನು ಜಗತ್ತಿನಾದ್ಯಂತ ಬಳಸಲಾಗುತ್ತಿದೆ. ದೃಷ್ಟಿಹೀನರು ಮತ್ತು ಭಾಗಶಃ ದೃಷ್ಟಿಹೀನರ ಸಂಪರ್ಕ ಮತ್ತು ಅವರ ಮಾನವ ಹಕ್ಕುಗಳ ರಕ್ಷಣೆಗಾಗಿ ಹೋರಾಡಿದ ಮಹಾನ್‌ಚೇತನ ಲೂಯಿಸ್ ಬ್ರೈಲ್ ಅವರ ನೆನಪಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ದೃಷ್ಟಿಇಲ್ಲದವರು ಪುಸ್ತಕಗಳನ್ನು ಓದುವ, ಬರೆಯುವ ವಲಯದಲ್ಲಿ ಲೂಯಿಸ್ ಬ್ರೈಲ್ ಅವರು ಮಾಡಿರುವ ಸಾಧನೆಯನ್ನು ನೆನಪು ಮಾಡಿಕೊಳ್ಳಲಾಗುತ್ತಿದೆ.

*****

ಚೀನಾದಲ್ಲಿ ತೀವ್ರ ಪ್ರಮಾಣದ ಜ್ವರ ಕಾಣಿಸಿಕೊಂಡಿದ್ದು, ಆಸ್ಪತ್ರೆಗೆ ಜ್ವರ ಪೀಡಿತರು ದಾಖಲಾಗುವ ಸಂಖ್ಯೆ ಹೆಚ್ಚಾಗಿದೆ. ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಮಾವೊನಿಂಗ್ ಮಾತನಾಡಿ, ಚಳಿಗಾಲದ ಹಿನ್ನೆಲೆಯಲ್ಲಿ ಉಸಿರಾಟದ ತೊಂದರೆಯಿಂದ ಹೆಚ್ಚಿನ ಪ್ರಮಾಣದ ರೋಗಿಗಳು ಕಂಡುಬರುತ್ತಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ, ಸೋಂಕಿತರ ತೀವ್ರತೆ ಕಡಿಮೆ ಇದೆ. ವಿದೇಶಿಗರು ಚೀನಾಗೆ ಭೇಟಿ ನೀಡಲು ಯಾವುದೇ ತೊಂದರೆಯಿಲ್ಲ ಎಂದು ಹೇಳಿದ್ದಾರೆ.

*****

ನವದೆಹಲಿಯಲ್ಲಿ ನಿನ್ನೆ ೧೯ನೇ ಭಾರತ-ಇರಾನ್ ವಿದೇಶಾಂಗ ವ್ಯವಹಾರಗಳ ಉನ್ನತಾಧಿಕಾರಿಗಳ ಸಮಾಲೋಚನೆ ನಡೆಯಿತು. ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಬಾಂಧವ್ಯ, ಸಂಸ್ಕೃತಿ, ಜನರಿಂದ ಜನರ ನಡುವಿನ ಸಂಬಂಧ ಬಲವರ್ಧನೆ ಕುರಿತು ಪ್ರಗತಿ ಪರಿಶೀಲನೆ ನಡೆಸಲಾಯಿತು. ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಹಾಗೂ ಇರಾನ್‌ನ ಉಪ ವಿದೇಶಾಂಗ ಸಚಿವ ಮಜಿದ್ ತಾಕಟ್ ರವಂಚಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಪಶ್ಚಿಮ ಏಷ್ಯಾ ಹಾಗೂ ಅಫ್ಘಾನಿಸ್ತಾನದ ಪರಿಸ್ಥಿತಿ ಕುರಿತು ಚರ್ಚೆ ನಡೆಸಲಾಗಿದೆ.

ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ಬೆಳವಣಿಗೆಗಳ ಬಗ್ಗೆಯೂ ವಿಸ್ತೃತ ಸಮಾಲೋಚನೆ ನಡೆಸಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪ್ರಕಟಣೆ ತಿಳಿಸಿದೆ.

*****

ಉತ್ತರ ಭಾರತದಲ್ಲಿ ಶೀತಗಾಳಿ ತೀವ್ರಗೊಂಡಿದ್ದು, ಮಂಜು ಮುಸುಕಿದ ವಾತಾವರಣದಿಂದಾಗಿ ಜನಜೀವನ ಬಾಧಿತವಾಗಿದೆ. ಇಂದು ಕೆಲವೆಡೆ ದಟ್ಟ ಮಂಜು ಆವರಿಸಿದ್ದು, ಸಂಚಾರ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ತೀವ್ರ ಮಂಜಿನ ಕಾರಣದಿಂದಾಗಿ ದೆಹಲಿ, ಉತ್ತರ ಪ್ರದೇಶ ಹಾಗೂ ಹರಿಯಾಣದಲ್ಲಿ ವಾಹನ ಸಂಚಾರ ವ್ಯತ್ಯಯಗೊಂಡಿದೆ. ದೆಹಲಿಯ ವಿಮಾನ ನಿಲ್ದಾಣದಲ್ಲಿ ವಿಮಾನ ಸಂಚಾರದ ಮೇಲೂ ಪ್ರತಿಕೂಲ ಹವಾಮಾನ ತೊಂದರೆ ಉಂಟುಮಾಡಿದೆ. ಮುಂದಿನ ಎರಡು ದಿನಗಳ ಕಾಲ ಜಮ್ಮು ಮತ್ತು ಕಾಶ್ಮೀರ, ಲಡಾಖ್, ಗಿಲ್ಗಿಟ್, ಬಲ್ತಿಸ್ತಾನ್, ಮುಝಫರಾಬಾದ್‌ನಲ್ಲಿ ಭಾರೀ ಮಳೆ ಮತ್ತು ಹಿಮಪಾತವಾಗುವ ಸಾಧ್ಯತೆ ಇದೆ.

*****

ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯಲ್ಲಿ ನಿನ್ನೆ ಚೆಸ್ ಚಾಂಪಿಯನ್ ಕೋನೇರು ಹಂಪಿ ಮತ್ತು ಅವರ ಕುಟುಂಬವನ್ನು ಭೇಟಿಯಾದರು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಧಾನಿ, ಕೋನೇರು ಹಂಪಿ ಅವರನ್ನು ಕ್ರೀಡಾ ಮಾದರಿ ಹಾಗೂ ಮಹತ್ವಾಕಾಂಕ್ಷಿ ಆಟಗಾರರಿಗೆ ಸ್ಪೂರ್ತಿಯ ಮೂಲ ಎಂದು ಕರೆದಿದ್ದಾರೆ. ಆಕೆಯ ಬುದ್ಧಿಶಕ್ತಿ ಮತ್ತು ದೃಢಸಂಕಲ್ಪ ಸ್ಪಷ್ಟವಾಗಿ ಗೋಚರಿಸುತ್ತದೆ, ಭಾರತಕ್ಕೆ ಅವರು ಅಪಾರ ಹೆಮ್ಮೆ ತಂದಿದ್ದಾರೆ, ಮಾತ್ರವಲ್ಲದೆ ಶ್ರೇಷ್ಠತೆ ಏನೆಂಬುದನ್ನು ಪುನರ್ ವ್ಯಾಖ್ಯಾನಿಸಿದ್ದಾರೆ ಎಂದು ಪ್ರಧಾನಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.ಕೋನೇರುಹಂಪಿ, ಮಹಿಳೆಯರ ವಿಶ್ವ ಚೆಸ್ ಚಾಂಪಿಯನ್‌ಶಿಪ್‌ನ ರನ್ನರ್-ಅಪ್ ಮತ್ತು ಎರಡು ಬಾರಿ ಮಹಿಳಾ ವಿಶ್ವ ರಾಪಿಡ್ ಚೆಸ್ ಚಾಂಪಿಯನ್ ಆಗಿದ್ದಾರೆ.

*****

ಸಿಡ್ನಿಯಲ್ಲಿ ನಡೆಯುತ್ತಿರುವ ಬಾರ್ಡರ್-ಗವಾಸ್ಕರ್ ಟ್ರೋಫಿಯ ನಿರ್ಣಾಯಕ ಐದನೇ ಮತ್ತು ಅಂತಿಮ ಕ್ರಿಕೆಟ್ ಟೆಸ್ಟ್ ಪಂದ್ಯದ ೨ನೇ ದಿನವಾದ ಇಂದು, ಭಾರತ ವಿರುದ್ಧದ ಮೊದಲ ಇನ್ನಿಂಗ್ಸನಲ್ಲಿ ಆಸ್ಟ್ರೇಲಿಯಾ, ಭೋಜನ ವಿರಾಮದ ವೇಳೆಗೆ ೨೯ ಓವರ್‌ಗಳಲ್ಲಿ ೫ ವಿಕೆಟ್ ನಷ್ಟಕ್ಕೆ ೧೦೧ ರನ್ ಗಳಿಸಿ ಆಡುತ್ತಿದೆ. ಆರಂಭಿಕ ದಿನವಾದ ನಿನ್ನೆ, ಭಾರತದ ಪ್ರಮುಖ ಬ್ಯಾಟ್ಸಮನ್‌ಗಳು ಅಧಿಕ ರನ್ ಗಳಿಸುವಲ್ಲಿ ವಿಫಲರಾದರು. ತನ್ನ ಮೊದಲ ಇನ್ನಿಂಗ್ಸನಲ್ಲಿ ಭಾರತ, ೭೨.೨ ಓವರ್ ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು ಕೇವಲ ೧೮೫ ರನ್‌ಗಳಿಸಲಷ್ಟೇ ಶಕ್ತವಾಯಿತು. ಭಾರತದ ಪರ ರಿಷಬ್ ಪಂತ್ ೪೦, ನಾಯಕ ಜಸ್ಪ್ರೀತ್ ಬುಮ್ರಾ ೨೨ ಹಾಗೂ ರವೀಂದ್ರ ಜಡೇಜಾ ೨೬ ರನ್ ಗಳಿಸಿದರು. ಆಸೀಸ್ ಪರ ಸ್ಕಾಟ್ ಬೋಲ್ಯಾಂಡ್ ನಾಲ್ಕು ವಿಕೆಟ್ ಪಡೆದರು. ಇದಕ್ಕೂ ಮುನ್ನ ಭಾರತ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತ್ತು. ರೋಹಿತ್ ಶರ್ಮಾ ಅನುಪಸ್ಥಿತಿಯಲ್ಲಿ ಜಸ್ಪ್ರೀತ್ ಬುಮ್ರಾ ನಾಯಕತ್ವ ವಹಿಸಿಕೊಂಡರು. ಮೆಲ್ಬೋರ್ನ್‌ನಲ್ಲಿ ನಡೆದ ನಾಲ್ಕನೇ ಟೆಸ್ಟನಲ್ಲಿ, ಆತಿಥೇಯ ಆಸ್ಟ್ರೇಲಿಯಾ, ಭಾರತದ ವಿರುದ್ಧ ೧೮೪ ರನ್‌ಗಳ ಜಯ ಗಳಿಸಿ, ಸರಣಿಯಲ್ಲಿ ೨-೧ ಮುನ್ನಡೆ ಸಾಧಿಸಿತ್ತು. ಬಾರ್ಡರ್-ಗವಾಸ್ಕರ್ ಟ್ರೋಫಿಯಲ್ಲಿ ತನ್ನ ಹಿಡಿತ ಉಳಿಸಿಕೊಳ್ಳುವುದು ಮಾತ್ರವಲ್ಲದೆ, ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ನ ಸ್ಥಾನದ ಆಸೆಯನ್ನು ಜೀವಂತವಾಗಿರಿಸಿಕೊಳ್ಳಲು ಭಾರತ ತಂಡ ಅಂತಿಮ ಪಂದ್ಯವನ್ನು ಗೆಲ್ಲಲೇ ಬೇಕಾದ ಒತ್ತಡದಲ್ಲಿದೆ.

*****

ಆಂಧ್ರಪ್ರದೇಶದ ವಿಜಯನಗರಂನಲ್ಲಿ ನಿನ್ನೆ ನಡೆದ ವಿಜಯ್ ಹಜಾರೆ ಟ್ರೋಫಿಯ ಡಿ ಗುಂಪಿನ ಪಂದ್ಯದಲ್ಲಿ ವಿದರ್ಭ ತಂಡ ೮ ವಿಕೆಟ್‌ಗಳಿಂದ ಉತ್ತರ ಪ್ರದೇಶವನ್ನು ಮಣಿಸಿದೆ. ಯಶ್ ರಾಥೋಡ್ ಅವರ ಅಜೇಯ ೧೩೮ ರನ್ ಮತ್ತು ನಾಯಕ ಕರುಣ್ ನಾಯರ್ ಅವರ ಶತಕದ ನೆರವಿನಿಂದ ವಿದರ್ಭ, ಕೇವಲ ಎರಡು ವಿಕೆಟ್ ನಷ್ಟಕ್ಕೆ ೩೦೮ ರನ್ ಗಳ ಗುರಿ ತಲುಪಿ, ಜಯ ಸಾಧಿಸಿತು.

*****

ಹಾಕಿ ಇಂಡಿಯಾ ಲೀಗ್ ಟೂರ್ನಿಯಲ್ಲಿ ಕಳೆದ ರಾತ್ರಿ ರೂರ್ಕೆಲಾದಲ್ಲಿ ನಡೆದ ಪಂದ್ಯದ ಶೂಟೌಟ್‌ನಲ್ಲಿ ತಮಿಳುನಾಡು ಡ್ರ್ಯಾಗನ್ಸ್ ತಂಡ, ವೇದಾಂತ ಕಳಿಂಗ ಲ್ಯಾನ್ಸರ್ಸ್ ತಂಡವನ್ನು ಸೋಲಿಸಿದೆ. ಡ್ರ್ಯಾಗನ್ಸ್ ತಂಡ ನಿಯಮಿತ ಸಮಯದಲ್ಲಿ ಸ್ಕೋರ್ ಅನ್ನು ೨-೨ ಗೆ ಸಮಗೊಳಿಸಿ, ಬಳಿಕ ೬-೫ ಅಂಕಗಳೊಂದಿಗೆ ಶೂಟೌಟ್‌ನಲ್ಲಿ ವಿಜಯಶಾಲಿಯಾಗಿ, ಪ್ರಮುಖ ಬೋನಸ್ ಅಂಕವನ್ನು ಪಡೆದರು. ಇಂದು ಸಂಜೆ ೬ ಗಂಟೆಗೆ, ಶ್ರಾಚಿ ರಾರ್ ಬೆಂಗಾಲ್ ಟೈಗರ್ಸ್ ಡೆಲ್ಲಿ ತಂಡ, ಎಸ್‌ಜಿ ಪೈಪರ್ಸ್ ವಿರುದ್ಧ ಸೆಣಸಲಿದ್ದು, ರಾತ್ರಿ ೮:೧೫ಕ್ಕೆ ನಡೆಯುವ ಮತ್ತೊಂದು ಪಂದ್ಯದಲ್ಲಿ ಹೈದರಾಬಾದ್ ತೂಫಾನ್ಸ್ ತಂಡ, ಗೋನಾಸಿಕಾ ತಂಡವನ್ನು ಎದುರಿಸಲಿದೆ.

*****

ರಾಷ್ಟ್ರೀಯ ವಾರ್ತೆಗಳು ೦೪.೦೧.೨೦೨೫ ಬೆಳಗ್ಗೆ. ೦೭.೩೫ ಪಿಎಂ-ಗ್ರಾಮೀಣ್ ಮಹೋತ್ಸವ್ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ನವದೆಹಲಿಯಲ್ಲಿ ಗ್ರಾಮೀಣ ಭಾರತ ಮಹೋತ್ಸವ -೨೦೨೫ ಅನ್ನು ಉದ್ಘಾಟಿಸಲಿದ್ದಾರೆ. ಗ್ರಾಮೀಣ ಮೂಲಸೌಕರ್ಯಗಳನ್ನು ಹೆಚ್ಚಿಸಲು, ಸ್ವಾವಲಂಬಿ ಆರ್ಥಿಕತೆಯನ್ನು ಸೃಷ್ಟಿಸಲು ಮತ್ತು ಗ್ರಾಮೀಣ ಸಮುದಾಯಗಳಲ್ಲಿ ನಾವೀನ್ಯತೆಯನ್ನು ಬೆಳೆಸುವ ಗುರಿಯನ್ನು ಮಹೋತ್ಸವ ಹೊಂದಿದೆ. ಮಹೋತ್ಸವದಲ್ಲಿ ರೋಮಾಂಚಕ ಪ್ರದರ್ಶನಗಳ ಮೂಲಕ ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಪ್ರದರ್ಶಿಸಲಾಗುತ್ತದೆ. ಆರು ದಿನಗಳ ಕಾಲ ನಡೆಯುವ ಮಹೋತ್ಸವದ ಘೋಷ ವಾಕ್ಯ - ವಿಕಸಿತ ಭಾರತ- ೨೦೪೭ ಕ್ಕಾಗಿ ಚೇತರಿಸಿಕೊಳ್ಳುವ ಗ್ರಾಮೀಣ ಭಾರತವನ್ನು ನಿರ್ಮಿಸುವುದು ಎಂಬುದಾಗಿದೆ. ಉದ್ಯಮಶೀಲತೆಯ ಮೂಲಕ ಗ್ರಾಮೀಣ ಮಹಿಳೆಯರನ್ನು ಸಬಲೀಕರಣಗೊಳಿಸುವುದು ಮಹೋತ್ಸವದ ಪ್ರಮುಖ ಧ್ಯೇಯವಾಗಿದೆ. ಸರ್ಕಾರಿ ಅಧಿಕಾರಿಗಳು, ಗ್ರಾಮೀಣ ಉದ್ಯಮಿಗಳು, ಕುಶಲಕರ್ಮಿಗಳು ಮತ್ತು ವಿವಿಧ ವಲಯಗಳ ಮಧ್ಯಸ್ಥಗಾರರನ್ನು ಒಟ್ಟುಗೂಡಿಸಿ, ಸಹಕಾರಿ ಮತ್ತು ಸಾಮೂಹಿಕ ಗ್ರಾಮೀಣ ಪರಿವರ್ತನೆಗಾಗಿ ಮಾರ್ಗಸೂಚಿ ರಚಿಸಲಾಗುವುದು.

ಈಶಾನ್ಯ ಭಾರತದ ಮೇಲೆ ವಿಶೇಷ ಗಮನಹರಿಸುವುದರೊಂದಿಗೆ, ಗ್ರಾಮೀಣ ಜನಸಂಖ್ಯೆಯಲ್ಲಿ ಆರ್ಥಿಕ ಸ್ಥಿರತೆ ಮತ್ತು ಆರ್ಥಿಕ ಭದ್ರತೆಯನ್ನು ಉತ್ತೇಜಿಸುವ ಉದ್ದೇಶವನ್ನು ಮಹೋತ್ಸವ ಒಳಗೊಂಡಿದೆ.

*****

ಗುವಾಹತಿಯ ಇಂದಿರಾ ಗಾಂಧಿ ಅಥ್ಲಿಟಿಕ್ ಕ್ರೀಡಾಂಗಣದಲ್ಲಿ ಇಂಡಿಯನ್ ಸೂಪರ್ ಲೀಗ್ - ಐಎಸ್ಎಲ್ ಫುಟ್ಬಾಲ್ ಟೂರ್ನಿಯಲ್ಲಿ ಮೊಹಮದನ್ ಸ್ಪೋರ್ಟಿಂಗ್ ಕ್ಲಬ್ ಹಾಗೂ ನಾರ್ತ್ ಈಸ್ಟ್ ಯುನೈಟೆಡ್ ಫುಟ್ಬಾಲ್ ಕ್ಲಬ್ ನಡುವೆ ನಡೆದ ಪಂದ್ಯ ಡ್ರಾನಲ್ಲಿ ಅಂತ್ಯಗೊಂಡಿದೆ. ಉಭಯ ತಂಡಗಳು ಗೋಲು ಗಳಿಸುವ ಉಜ್ವಲ ಅವಕಾಶಗಳನ್ನು ಕಳೆದುಕೊಂಡವು. ನಾಳೆ ಸಂಜೆ ೫ ಗಂಟೆಗೆ ಭುವನೇಶ್ವರದಲ್ಲಿ ನಡೆಯುವ ಮತ್ತೊಂದು ಪಂದ್ಯದಲ್ಲಿ ಒಡಿಶಾ ಫುಟ್ಬಾಲ್ ಕ್ಲಬ್ ಹಾಗೂ ಗೋವಾ ಫುಟ್ಬಾಲ್ ಕ್ಲಬ್‌ಗಳು ಮುಖಾಮುಖಿಯಾಗಲಿವೆ. ಚೆನ್ನೈನ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆಯಲಿರುವ ಎರಡನೇ ಪಂದ್ಯದಲ್ಲಿ ಜೆಮ್‌ಶೆಡ್‌ಪುರ ಫುಟ್ಬಾಲ್ ಕ್ಲಬ್ ಹಾಗೂ ಬೆಂಗಳೂರು ಫುಟ್ಬಾಲ್ ಕ್ಲಬ್ ಪರಸ್ಪರ ಸೆಣಸಲಿವೆ.

******